**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 34 ಎಸಿಎಂ(2) 2013-14

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001,
ದಿನಾಂಕ: 11/07/2013.

**-:: ಸು ತ್ತೋ ಲೆ ::-**

**ವಿಷಯ:** 2013-14ನೇ ಸಾಲಿನಲ್ಲಿ ಖಾಸಗಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ತೃತೀಯ ಸೆಮಿಸ್ಟರ್, 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ, ವರ್ಗಾವಣೆ ಮತ್ತು ಮರು ಪ್ರವೇಶದ ಬಗ್ಗೆ ಸೂಚನೆಗಳು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 222 ಟಿಪಿಇ 2012, ದಿ:17/09/2012
2. ಸರ್ಕಾರದ ಆದೇಶ ಸಂಖ್ಯೆ: ಇಡಿ 99 ಟಿಪಿಟಿ01, ದಿ:4/3/2009.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 11 ಟಿಪಿಇ 07, ದಿ:3/12/07.

-00000000-

2013-14ನೇ ಸಾಲಿಗೆ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ತೃತೀಯ/ಐದನೇ ಸೆಮಿಸ್ಟರ್ ಡಿಪ್ಲೋಮಾಗೆ ಪ್ರವೇಶ, ಮರುಪ್ರವೇಶ ಮತ್ತು ಪ್ರವೇಶ ಪಡೆದ ನಂತರ ಅನೇಕ ವಿದ್ಯಾರ್ಥಿಗಳು ತಮ್ಮ ವೈಯುಕ್ತಿಕ ತೊಂದರೆಗಳನ್ನು ನಿವೇದಿಸಿಕೊಂಡು ತೃತೀಯ/ಐದನೇ ಸೆಮಿಸ್ಟರ್ ಡಿಪ್ಲೋಮಾಗೆ ವಿವಿಧ ಹಂತದಲ್ಲಿ ವರ್ಗಾವಣೆ ಬಯಸುವ ಅಭ್ಯರ್ಥಿಗಳ ಸಂಬಂಧದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಯನ್ನು ಕೆಳಗೆ ನಮೂದಿಸಲಾಗಿದೆ.

1) ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವರ್ಗಾವಣೆಯನ್ನು ನಿಗಧಿತ ಅವಧಿಯ ಒಳಗೆ ಮುಗಿಸುವ ದೃಷ್ಟಿಯಿಂದ ಕೆಳಗೆ ನಮೂದಿಸಿರುವ ಅವಧಿಯ ಒಳಗೆ ನಿರ್ದೇಶನಾಲಯಕ್ಕೆ ಸಲ್ಲಿಸಿದ ಪ್ರಕರಣಗಳನ್ನು ಮಾತ್ರ ಪರಿಶೀಲಿಸಿ ಅನುಮೋದನೆ ನೀಡುವ ಬಗ್ಗೆ ಪರಿಗಣಿಸಲಾಗುವುದು.

2) ಈ ಸುತ್ತೋಲೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಸ್ಪಷ್ಟ ಮಾಹಿತಿಯನ್ನು ವಿದ್ಯಾರ್ಥಿಗಳಿಂದ ಪಡೆದು, ಸಂಬಂಧಿಸಿದ ಪಾಲಿಟೆಕ್ನಿಕ್ ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ ನಿಗದಿತ ಅವಧಿಯೊಳಗೆ ನಿರ್ದೇಶನಾಲಯಕ್ಕೆ ಖುದ್ದಾಗಿ ಅರ್ಜಿ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಬಂದಂತಹ ಅರ್ಜಿಗಳನ್ನು ಪರಿಶೀಲಿಸಿ ವರ್ಗಾವಣೆಯು ಕ್ರಮವಾಗಿದ್ದಲ್ಲಿ ಅರ್ಜಿ ಸಲ್ಲಿಸಿದ ದಿನವೇ ವರ್ಗಾವಣೆಗೆ ಅನುಮತಿ ನೀಡುವ ಬಗ್ಗೆ ಪರಿಗಣಿಸಲಾಗುವುದು. ಈ ನಿರ್ದೇಶನಾಲಯದಿಂದ ವರ್ಗಾವಣೆ ಆದೇಶ ಬರುವವರೆಗೆ ವಿದ್ಯಾರ್ಥಿಯು ಹಿಂದಿನ ಸಂಸ್ಥೆಯಲ್ಲಿಯೇ ವ್ಯಾಸಂಗ ಮಾಡುತ್ತಿರಬೇಕು. ವರ್ಗಾವಣೆ ಆದೇಶ ಬಂದ ಮೇಲೆ ವಿದ್ಯಾರ್ಥಿಯ ಹಾಜರಾತಿ ಹಾಗೂ ಇತರೆ ಮಾಹಿತಿಯೊಂದಿಗೆ ವಿದ್ಯಾರ್ಥಿಯು ವರ್ಗಾವಣೆ ಹೊಂದಿದ ಸಂಸ್ಥೆಗೆ ವರದಿ ಮಾಡುವುದು.

3) ಈ ಸೂಚನೆಗಳನ್ನು ಎಲ್ಲಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಕಡ್ಡಾಯವಾಗಿ ಅನುಸರಿಸಿ ಕೆಳಗೆ ನಮೂದಿಸಿರುವ ಅವಧಿಯೊಳಗೆ ವರ್ಗಾವಣೆ ಪ್ರಕರಣಗಳನ್ನು ನಿರ್ದೇಶನಾಲಯಕ್ಕೆ ಖುದ್ದಾಗಿ/ವಿದ್ಯಾರ್ಥಿಗಳ ಮೂಲಕ ಕಳುಹಿಸಿದಲ್ಲಿ ವರ್ಗಾವಣೆ ಬಗ್ಗೆ ಸಕಾಲಿಕ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ. ತಡವಾಗಿ ಬಂದಂತಹ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಪ್ರಕರಣಗಳನ್ನು ನಿರ್ದೇಶನಾಲಯಕ್ಕೆ ಕಳುಹಿಸಬಾರದೆಂದು ತಿಳಿಸಲಾಗಿದೆ.

**ತೃತೀಯ ಸೆಮಿಸ್ಟರ್, ಐದನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ ನೀಡುವ ಬಗ್ಗೆ ಹಾಗೂ ವರ್ಗಾವಣೆಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ವೇಳಾ ಪಟ್ಟಿ.**

1. ತೃತೀಯ ಸೆಮಿಸ್ಟರ್, ಐದನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ ನೀಡಲು ಅಂತಿಮ ದಿನಾಂಕ: **29/07/2013.**
2. ವರ್ಗಾವಣೆ ಶುಲ್ಕ ₹ 1,000/-ನ್ನು ದಿ: **29/07/2013** ರ ಒಳಗೆ ಸರ್ಕಾರದ ಖಜಾನೆ ಅಥವಾ ಸಮೀಪದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪಾವತಿ ಮಾಡಿರಬೇಕು
3. ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಎರಡೂ ಪಾಲಿಟೆಕ್ನಿಕ್‌ಗಳ ಎನ್‌ಓಸಿ, ಅಭ್ಯರ್ಥಿಯ ಮನವಿ ಹಾಗೂ ವರ್ಗಾವಣೆ ಶುಲ್ಕಕ್ಕೆ ಸಂಬಂಧಿಸಿದಂತೆ ಮೂಲ ಚಲನ್ ಅಥವಾ ರಸೀದಿಯೊಂದಿಗೆ ವರ್ಗಾವಣೆ ಮೇರೆಗೆ ಪ್ರವೇಶ ಕೋರುವ ಪಾಲಿಟೆಕ್ನಿಕ್‌ನಿಂದ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವ ಅಂತಿಮ ದಿ: **08/08/2013.**
4. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳನ್ನು ಕಡ್ಡಾಯವಾಗಿ ಪ್ರವೇಶ ಶುಲ್ಕದ ಜೊತೆಗೆ ಪಾವತಿ ಮಾಡತಕ್ಕದ್ದು.

**ಅಭ್ಯರ್ಥಿಗಳ ಮರುಪ್ರವೇಶಕ್ಕೆ ನಿಗದಿಪಡಿಸಿರುವ ಅಂತಿಮ ದಿನಾಂಕ**

| | |
|---|---|
| 1, 3 ಮತ್ತು 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ರಿಪೀಟರ್ ಆಗಿ ಸೇರಬಯಸುವ ವಿದ್ಯಾರ್ಥಿಗಳ ಪ್ರವೇಶದ ಅಂತಿಮ ದಿನಾಂಕ | ರಿಪೀಟರ್ ಪ್ರವೇಶವನ್ನು ರಿಪೀಟರ್ ಕೋಟಾದ ಪ್ರವೇಶ ನಿಯಮಗಳ ಪ್ರಕಾರ ಶೇ. 10ರ ಮಿತಿಯಲ್ಲಿ ಆಯಾ ಕೋರ್ಸಿಗೆ ದಿ: **29/07/2013** ರ ಒಳಗೆ ಪ್ರವೇಶ ನೀಡುವುದು. ರಿಪೀಟರ್ ಪ್ರವೇಶದಲ್ಲಿ ಯಾವುದೇ ಕೋರ್ಸ್ ಬದಲಾವಣೆಗೆ ಅವಕಾಶವಿರುವುದಿಲ್ಲ. **ರಿಪೀಟರ್ ಆಗಿ ಒಬ್ಬ ವಿದ್ಯಾರ್ಥಿಗೆ ಒಂದು ಸಾರಿ ಮಾತ್ರ ಹಾಗೂ ವಿದ್ಯಾರ್ಥಿಯು ಮೊದಲು ಪ್ರವೇಶ ಪಡೆದ ವರ್ಷದಿಂದ ಮೂರು ವರ್ಷದ ಅವಧಿಯೊಳಗೆ ಮಾತ್ರ ರಿಪೀಟರ್ ಆಗಿ ಪ್ರವೇಶ** ನೀಡಲು **ಅವಕಾಶವಿರುತ್ತದೆ.** ರಿಪೀಟರ್ ಪ್ರವೇಶದ ಅನುಮೋದನೆಗೆ ಸಂಬಂಧಿಸಿದಂತೆ ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಪ್ರತ್ಯೇಕವಾಗಿ ನಿಗಧಿತ ಅವಧಿ ಒಳಗೆ ಪ್ರಸ್ತಾವನೆ ಸಲ್ಲಿಸುವುದು. |

**ವಿಶೇಷ ಸೂಚನೆ:**

1. ಖಾಸಗಿ ಪಾಲಿಟೆಕ್ನಿಕ್‌ನಿಂದ ಅನುದಾನಿತ ಅಥವಾ ಸರ್ಕಾರಿ ಪಾಲಿಟೆಕ್ನಿಕ್‌ಗೆ ವರ್ಗಾವಣೆ ನೀಡಲು ಅವಕಾಶವಿರುವುದಿಲ್ಲ. ಆದಾಗ್ಯೂ ಖಾಸಗಿ ಪಾಲಿಟೆಕ್ನಿಕ್‌ನಿಂದ ಅನುದಾನಿತ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿ ಕೋಟಾದ ಸ್ಥಾನಗಳಡಿಯಲ್ಲಿ ವರ್ಗಾವಣೆಗೆ ಪರಿಗಣಿಸಬಹುದಾಗಿದೆ.

2. 03 ಮತ್ತು 05ನೇ ಸೆಮಿಸ್ಟರ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವುದನ್ನು ಖಚಿತಪಡಿಸಿಕೊಂಡು ಪ್ರವೇಶ ನೀಡತಕ್ಕದ್ದು. 01 ರಿಂದ 04ನೇ ಸೆಮಿಸ್ಟರ್ ಪರಿಕ್ಷೆಗಳಲ್ಲಿ 04 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣಗೊಂಡಿದಲ್ಲಿ ಅಂತಹ ವಿದ್ಯಾರ್ಥಿಗಳು 03 & 05ನೇ ಸೆಮಿಸ್ಟರ್ ಪ್ರವೇಶ ಪಡೆಯಲು ಅರ್ಹರಿರುವುದಿಲ್ಲ.

3. ನಿರ್ದೇಶನಾಲಯದಿಂದ ವರ್ಗಾವಣೆಗೆ ಸಂಬಂಧಿಸಿದಂತೆ ಅನುಮೋದನೆ ಬರುವವರೆಗೆ ಅಭ್ಯರ್ಥಿಯು ಹಿಂದಿನ ಪಾಲಿಟೆಕ್ನಿಕ್‌ನಲ್ಲೇ ವ್ಯಾಸಂಗ ಮಾಡುತ್ತಿರುವ ಷರತ್ತಿಗೆ ಒಳಪಟ್ಟಿರುತ್ತದೆ.

4. **ಸಂಖ್ಯಾಧಿಕ ಸೀಟುಗಳ (Supernumerary Seats) ಕೋಟಾದಡಿ (SNQ QUOTA) ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪಾಲಿಟೆಕ್ನಿಕ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.**

5. 02, 04, 06ನೇ ಸೆಮಿಸ್ಟರ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.

6. ನಿಗದಿಪಡಿಸಲಾಗಿರುವ ಪ್ರವೇಶ ದಿನಾಂಕವು ಅಂತಿಮವಾಗಿದ್ದು ಪ್ರಿನ್ಸಿಪಾಲರು ಈ ಸಂಗತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಪ್ರವೇಶ ಪ್ರಕ್ರಿಯೆಯನ್ನು ನಿಗದಿಪಡಿಸಲಾದ ದಿನಾಂಕದೊಳಗೆ ಮುಗಿಸತಕ್ಕದ್ದು.

7. ವರ್ಗಾವಣೆ/ ರಿಪೀಟರ್ ಆಗಿ ಪ್ರವೇಶ ನೀಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ನಿಗದಿಪಡಿಸಲಾದ ಪ್ರವೇಶ ಸಂಖ್ಯೆಯ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ಜರುಗಿಸತಕ್ಕದ್ದು.

8. 2012-13ನೇ ಸಾಲಿನಲ್ಲಿ ಪ್ರಥಮ & ತೃತೀಯ ಸೆಮಿಸ್ಟರ್ ಡಿಪ್ಲೋಮಾ ವ್ಯಾಸಂಗಕ್ಕೆ ಮರುಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಮಾತ್ರ ಸರ್ಕಾರದ ಆದೇಶ ಸಂ. ಇಡಿ 10 ಟಿಪಿಇ 2012, ದಿ:29-05-2012ರ ಪ್ರಕಾರ ಪರಿಷ್ಕೃತ ಬೋಧನಾ ಶುಲ್ಕವನ್ನು ವಸೂಲಿ ಮಾಡುವುದು.

9. 03 & 05 ನೇ ಸೆಮಿಸ್ಟರ್ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಕಳೆದ ಸಾಲಿನಲ್ಲಿ ಜಾರಿಯಲ್ಲಿದ್ದ ಬೋಧನಾ ಶುಲ್ಕವನ್ನು ವಸೂಲಿ ಮಾಡತಕ್ಕದ್ದು.

10. ಪ್ರತಿ ಸೆಮಿಸ್ಟರ್‌ಗೂ ವಿದ್ಯಾರ್ಥಿಗಳು ನಿಗದಿಪಡಿಸಲಾದ ಶುಲ್ಕವನ್ನು ನಿಗದಿಪಡಿಸಿದ ದಿನಾಂಕದೊಳಗೆ ಪಾವತಿಸಿದ ನಂತರವೇ ತರಗತಿಗೆ ಹಾಜರಾಗಲು ಅನುಮತಿ ಮತ್ತು ಹಾಜರಾತಿ ನೀಡತಕ್ಕದ್ದು. ತಡವಾದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ನಿರ್ದೇಶನಾಲಯಕ್ಕೆ ಸಲ್ಲಿಸಬಾರದು.

**ನಿರ್ದೇಶಕರು**

***ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ-***
***ಸೂಕ್ತ ಮಾಹಿತಿ ಹಾಗೂ ಅನುಸರಣೆಗಾಗಿ.***

**ಪ್ರತಿ :-**

1. ಕಾರ್ಯದರ್ಶಿಯವರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ. ಬೆಂಗಳೂರು
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
3. ನಿರ್ದೇಶಕರ ಮತ್ತು ಜಂಟಿ ನಿರ್ದೇಶಕರ ಆಪ್ತ ಶಾಖೆಗೆ.
4. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ. ಬೆಂಗಳೂರು - **ಸದರಿ ಸುತ್ತೋಲೆಯನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.**
6. ಆರ್‌ಡಿಎಂ ವಿಭಾಗಗಳಿಗೆ.
7. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

ತಾಂತ್ರಿಕ ಶಿಕ್ಷಣ ಇಲಾಖೆ

ಪಾಲಿಟೆಕ್ನಿಕ್ ಬದಲಾವಣೆಗಾಗಿ ಅರ್ಜಿ

(ಖಾಸಗಿ ಪಾಲಿಟೆಕ್ನಿಕ್‌ಗೆ ಸಂಬಂಧಿಸಿದಂತೆ)

(ನಮೂನೆ-1)

(ವಿದ್ಯಾರ್ಥಿ ಭರ್ತಿ ಮಾಡಬೇಕಾದುದು)

೧. ವಿದ್ಯಾರ್ಥಿಯ ಹೆಸರು ಮತ್ತು ಪೂರ್ಣ ವಿಳಾಸ_ _ _ _ _ _ _ _ _ _ _ _ _ _ _ _ _ _ _ _ _ _ _

೨. ವಿದ್ಯಾರ್ಥಿಯ ತಂದೆಯ ಹೆಸರು_ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _

೩. ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ತರಗತಿ/ಕೋರ್ಸ್ ಮತ್ತು ಪಾಲಿಟೆಕ್ನಿಕ್‌ನ ಹೆಸರು ಮತ್ತು ಸದರಿ ತರಗತಿಗೆ ಪ್ರವೇಶ ಪಡೆದ ದಿನಾಂಕವನ್ನು ನಮೂದಿಸುವುದು _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _

೪. ಅಭ್ಯರ್ಥಿಯು ಯಾವ ಪಾಲಿಟೆಕ್ನಿಕ್ ಮತ್ತು ತರಗತಿ ಹಾಗೂ ಕೋರ್ಸ್‌ಗೆ ವರ್ಗಾವಣೆ ಕೋರಲಾಗಿದೆ._ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _

ಹಿಂದಿನ ಡಿಪ್ಲೋಮಾ ತರಗತಿಯಲ್ಲಿ ವ್ಯಾಸಂಗ ಮಾಡಿದ ವರ್ಷ ಮತ್ತು ನೋಂದಣಿ ಸಂಖ್ಯೆ _ _ _ _ _ _ _ _ _ _ _ _ _

೫. ಪಾಲಿಟೆಕ್ನಿಕ್ ವರ್ಗಾವಣೆಗೆ ಸಂಬಂಧಿಸಿದಂತೆ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸುವುದು.- _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _

**ಲಗತ್ತಿಸಬೇಕಾದ ಅಡಕಗಳು**

(೧) ಹಿಂದಿನ ತರಗತಿಯ ಅಂಕಪಟ್ಟಿ : ಅಂಕಪಟ್ಟಿಗಳು

(೨) ದಿನಾಂಕ: 29-07-2013 ರ ಒಳಗೆ ವರ್ಗಾವಣೆ ಶುಲ್ಕ ₹ **1,000/-**ನ್ನು ಪಾವತಿಸಿರುವ ಬಗ್ಗೆ ಚಲನ್ ಅಥವ ರಸೀದಿ ( ಸರ್ಕಾರಿ ಖಜಾನೆ ಅಥವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಜಮಾ ಮಾಡಿರಬೇಕು)

(೩) ಎರಡೂ ಪಾಲಿಟೆಕ್ನಿಕ್‌ಗಳ ಎನ್.ಓ.ಸಿ.

---

**ತಂದೆ/ಪೋಷಕರ ಸಹಿ**

**ವಿದ್ಯಾರ್ಥಿಯ ಸಹಿ**

## (ನಮೂನೆ – 2)

**ಅಭ್ಯರ್ಥಿಯು ವ್ಯಾಸಂಗ ಮಾಡುತ್ತಿರುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ನೀಡಬೇಕಾಗಿರುವ ಮಾಹಿತಿ**

ಸಂಖ್ಯೆ: ------------------------------------------------ ದಿನಾಂಕ: ------------

ಪಾಲಿಟೆಕ್ನಿಕ್‌ನ ಕೋಡ್ ಸಂಖ್ಯೆ ---------------------

ವಿದ್ಯಾರ್ಥಿಯು ಒದಗಿಸಿದ ಮಾಹಿತಿಯನ್ನು ಖುದ್ದು ಪರಿಶೀಲಿಸಲಾಗಿದೆ. ಮೇಲ್ಕಂಡ ವಿದ್ಯಾರ್ಥಿಯು ಈ ಪಾಲಿಟೆಕ್ನಿಕ್‌ನಲ್ಲಿ ತೃತೀಯ/ಅಂತಿಮ ಸೆಮಿಸ್ಟರ್ ಡಿಪ್ಲೋಮಾ ತರಗತಿಗೆ ನಿಗಧಿತ ಅವಧಿಯೊಳಗೆ ಪ್ರವೇಶ ಪಡೆದಿದ್ದು, ಅಭ್ಯರ್ಥಿಯು ತನ್ನ ವೈಯಕ್ತಿಕ ತೊಂದರೆಗಳನ್ನು ನಿವೇದಿಸಿಕೊಂಡು ಬೇರೊಂದು ಪಾಲಿಟೆಕ್ನಿಕ್‌ನಲ್ಲಿ ವ್ಯಾಸಂಗ ಮುಂದುವರಿಸಲು ಕೋರಿರುವುದನ್ನು ವಿದ್ಯಾರ್ಥಿಯ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ ವಿದ್ಯಾರ್ಥಿಯ ವರ್ಗಾವಣೆಗೆ ಈ ಪಾಲಿಟೆಕ್ನಿಕ್‌ನ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ಮತ್ತು ನಿಯಮಗಳ ಪ್ರಕಾರ ವಿದ್ಯಾರ್ಥಿಯು ವರ್ಗಾವಣೆಗೆ ಅರ್ಹರಿರುವರೆಂದು ದೃಢೀಕರಿಸಲಾಗಿದೆ ಹಾಗೂ ಅಭ್ಯರ್ಥಿಯ ಕೋರಿಕೆಯಂತೆ ಪಾಲಿಟೆಕ್ನಿಕ್ ಬದಲಾವಣೆಗೆ ಶಿಫಾರಸ್ಸು ಮಾಡಲಾಗಿದೆ. ವ್ಯಾಸಂಗದ ಅವಧಿಯಲ್ಲಿ ಅಭ್ಯರ್ಥಿಯ ಗುಣ ಮತ್ತು ನಡತೆಯು ಸಮರ್ಪಕವಾಗಿತ್ತು ಎಂದು ದೃಢೀಕರಿಸಲಾಗಿದೆ.

**ಅಭ್ಯರ್ಥಿಯ ವಿವರವನ್ನು ಕೆಳಗೆ ನಮೂದಿಸಲಾಗಿದೆ.**

೧) ಅಭ್ಯರ್ಥಿಯ ಹೆಸರು: ------------------------------------------------------

೨) ಪ್ರವೇಶ ಪಡೆದ ವರ್ಷ/ತರಗತಿ/ಕೋರ್ಸ್/ನೋಂದಣಿ ಸಂಖ್ಯೆ: ---------------------

೩) ಹಿಂದಿನ ತರಗತಿಯಲ್ಲಿ ಪ್ರವೇಶ ಪಡೆದ ದಿನಾಂಕ: ------------------------

೪) ನಿರ್ದೇಶನಾಲಯದಿಂದ ಪ್ರವೇಶಾನುಮೋದನೆ ಪಡೆದಿರುವ ಬಗ್ಗೆ ದಾಖಲೆಯ ಸಂಖ್ಯೆ ----------

5) **ಸಂಖ್ಯಾಧಿಕ ಸೀಟುಗಳ (Supernumerary Seats) ಕೋಟಾದಡಿ (SNQ QUOTA) ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪಾಲಿಟೆಕ್ನಿಕ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.**

ಸ್ಥಳ: **ಪ್ರಿನ್ಸಿಪಾಲರ ಸಹಿ ಮತ್ತು ಮೊಹರು.**

ದಿನಾಂಕ:

## (ನಮೂನೆ – 3)

**ವರ್ಗಾವಣೆ ಮೇರೆಗೆ ಪ್ರವೇಶ ಮಾಡಿಕೊಳ್ಳುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ನೀಡಬೇಕಾಗಿರುವ ಮಾಹಿತಿ**

ಸಂಖ್ಯೆ: ------------------------------------------------ ದಿನಾಂಕ: ------------

ಪಾಲಿಟೆಕ್ನಿಕ್‌ನ ಕೋಡ್ ಸಂಖ್ಯೆ ---------------------

ಅಭ್ಯರ್ಥಿಯ ಮೇಲ್ಕಂಡ ದಾಖಲೆಗಳನ್ನು ಪರಿಶೀಲಿಸಲಾಗಿದೆ. ವಿದ್ಯಾರ್ಥಿಯು ತೆಗೆದುಕೊಳ್ಳಲು ಬಯಸಿದ ಕೋರ್ಸ್‌ನ್ನು ಈ ಪಾಲಿಟೆಕ್ನಿಕ್‌ನಲ್ಲಿ ಭೋದಿಸಲಾಗುತ್ತಿದ್ದು, ಪ್ರಸ್ತುತ ಈ ಕೋರ್ಸ್‌ನ ತೃತೀಯ/ಅಂತಿಮ ಸೆಮಿಸ್ಟರ್ ಡಿಪ್ಲೋಮಾದಲ್ಲಿ ಇಂಟೇಕ್ ಮಿತಿಯೊಳಗೆ ಸ್ಥಾನ ಖಾಲಿ ಇರುತ್ತದೆ ಎಂದು ದೃಢೀಕರಿಸಲಾಗಿದೆ ಹಾಗೂ ಮೇಲ್ಕಂಡ ಅಭ್ಯರ್ಥಿಗೆ ವರ್ಗಾವಣೆ ಮೇರೆಗೆ ಪ್ರವೇಶ ನೀಡಲು ಈ ಪಾಲಿಟೆಕ್ನಿಕ್‌ನ ಯಾವುದೇ ಅಭ್ಯಂತರವಿರುವುದಿಲ್ಲ ಪ್ರಯುಕ್ತ, ಈ ಅಭ್ಯರ್ಥಿಯ ವರ್ಗಾವಣೆಗೆ ಅನುಮತಿ ನೀಡಬಹುದೆಂದು ಶಿಫಾರಸ್ಸು ಮಾಡಲಾಗಿದೆ. ವಿವರವನ್ನು ಕೆಳಗೆ ನಮೂದಿಸಿ ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿ ನಿರ್ದೇಶಕರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

೧) ಅಭ್ಯರ್ಥಿಯ ಹೆಸರು : ------------------------------------

೨) ವರ್ಗಾವಣೆ ಮೇರೆಗೆ ಪ್ರವೇಶ ಬಯಸಿರುವ ತರಗತಿ ಹಾಗೂ ಕೋರ್ಸ್ --------------
(ಸ್ಪಷ್ಟವಾಗಿ ನಮೂದಿಸುವುದು)

೩) ವರ್ಗಾವಣೆ ಶುಲ್ಕ ₹ 1,000/- ಕ್ಕೆ ಸಂಬಂಧಿಸಿದ ಮೂಲ ಚಲನ್ ಪ್ರತಿ.
(ವರ್ಗಾವಣೆ ಶುಲ್ಕವನ್ನು ದಿನಾಂಕ: 29-07-2013 ರ ಒಳಗೆ ಪಾವತಿ ಮಾಡಿರಬೇಕು).

ಸ್ಥಳ: **ಪ್ರಾಂಶುಪಾಲರ ಸಹಿ ಮೊಹರು.**

ದಿನಾಂಕ: